

## ಕಾಫಿ, ಅಕ್ಕಿಯಲ್ಲಿ ಬೆಳಗಿದ ಆರತಿ

ಮಾನವರ ಬದುಕು ನಂಬಿಕೆ ಮತ್ತು ಭರವಸೆಗಳೊಂದಿಗೆ ಮುನ್ನಡೆಯುತ್ತದೆ. ‘ನಂಬಿಕೆಗೆ ಸೃಷ್ಟಿ ಸುವ ಶಕ್ತಿಯಿದೆ’ ಎನ್ನಲಾಗುತ್ತದೆ. ಇದನ್ನು ವೈದ್ಯಕೀಯ ವಿಜ್ಞಾನ ಪ್ಲಾಸೆಬೋ ಪರಿಣಾಮದ ಉದಾಹರಣೆಯ ಮೂಲಕ ಪುಷ್ಟೀಕರಿಸುತ್ತದೆ. ಮನುಷ್ಯ ತನ್ನ ಸೃಷ್ಟಿಶೀಲ ಪ್ರತಿಭೆಯಿಂದ ತಯಾರಿಸಿದ ಆಭರಣಗಳನ್ನು, ಉಡುಗೆ ತೊಡುಗೆಗಳನ್ನು ತಾನು ನಂಬಿದ ಅನನ್ಯ ಶಕ್ತಿಯಾದ ದೇವರಿಗೂ ತೊಡಿಸಿ, ಅಲಂಕರಿಸಿ ಆರಾಧಿಸುವುದಿದೆ. ಹಣ್ಣುಹಂಪಲುಗಳನ್ನು, ಧಾನ್ಯಗಳನ್ನು, ಆಹಾರ ಪದಾರ್ಥಗಳನ್ನು ದೇವರಿಗೆ ಸಮರ್ಪಿಸಿ ಪ್ರಸಾದ ರೂಪದಲ್ಲಿ ಅದನ್ನು ಸೇವಿಸುವುದಿದೆ.

ಅಂತೆಯೇ ಚಿಕ್ಕಮಗಳೂರಿನ ವಾಣಿಜ್ಯ ಬೆಳೆಯಾದ ಕಾಫಿ ಬೀಜಗಳನ್ನು, ಆಹಾರ ಧಾನ್ಯವಾದ ಅಕ್ಕಿಯನ್ನು ಬಳಸಿ ಆರತಿ ತಟ್ಟೆಯನ್ನು ತಯಾರಿಸಿ ತಾನು ಆರಾಧಿಸುವ ಗಣಪತಿಗೆ ಆರತಿ ಬೆಳಗಲು ಕೊಪ್ಪದ ಮಹಿಳೆಯೊಬ್ಬರು ಕೊಂಡೊಯ್ಯುತ್ತಿರುವ ದೃಶ್ಯ ಕಂಡುಬರುತ್ತಲೇ, ಕ್ಯಾಮೆರಾದಲ್ಲಿ ಕ್ಲಿಕ್ಕಿಸಿಕೊಂಡೆ. ಕಾಫಿ ಬೀಜ ಮತ್ತು ಅಕ್ಕಿಯಿಂದ ತಯಾರಿಸಿದ ಆರತಿ ಎಲ್ಲರ ಮೆಚ್ಚುಗೆಗೆ ಪಾತ್ರ ವಾಯಿತು.

—ಎಸ್.ಎನ್. ಚಂದ್ರಕಲಾ, ಕೊಪ್ಪ

## ಚಾಣ ಇದ್ದವ ಚಾಣಕ್ಯ

ಕಬ್ಬಿಣದ ಎರಡು ದೊಡ್ಡ ಚಾಣ, ಒಂದು ಸುತ್ತಿಗೆ ಕೈಯಲ್ಲಿದ್ದರೆ ಎಂತಹ ಒಣಮರದ ತುಂಡನ್ನಾದಾರೂ ಒಡೆದು ಹೋಳು ಹೋಳು ಮಾಡಬಹುದು ಎನ್ನುತ್ತಾರೆ ಚಾಣದ ಮಹತ್ವ ಅರಿತವರು. ದೊಡ್ಡ ಗಾತ್ರದ ಕುಂಟೆಯನ್ನು ಸುಲಭವಾಗಿ ಒಡೆದು, ಅವನ್ನು ಉರುವಲಿಗೆ ಬಳಸಲು ಯೋಗ್ಯವಾಗಿ ಮಾಡಿಕೊಳ್ಳುವ ಜಾಣ್ಮೆ ನಮ್ಮ ಹಿರಿಯರಿಗಿತ್ತು. ಇದಕ್ಕಾಗಿ ಅವರು ಮನೆಯಲ್ಲಿ ಎರಡು ದೊಡ್ಡ ಗಾತ್ರದ ಕಬ್ಬಿಣದ ಚಾಣ ಮತ್ತು ಒಂದು ಸುತ್ತಿಗೆ ಇಟ್ಟುಕೊಳ್ಳುತ್ತಿದ್ದರು. ಕಡಿಮೆ ಶ್ರಮದಲ್ಲಿ ಉರುವಲಿಗೆ ಅವಶ್ಯವಿರುವಷ್ಟು ಒಣ ಚಕ್ಕೆಗಳನ್ನು ಮಾಡುವ ಚಾಣಾಕ್ಷತೆ ಬರುವುದು ಈ ಚಾಣದಿಂದ.

ಈಗೆಲ್ಲಾ ದೊಡ್ಡ ಗಾತ್ರದ ಮರದ ಒಣ ಕುಂಟೆಗಳನ್ನು ಉರುವಲು ಒಲೆಗೆ ಬಳಸಲು ಅನುಕೂಲವಾಗುವ ಚಿಕ್ಕ ಚಿಕ್ಕ ಗಾತ್ರಕ್ಕೆ ಒಡೆಯಲು ವಿದ್ಯುತ್ ಚಾಲಿತ ಯಂತ್ರಗಳು ಬಂದಿವೆ. ಇದೇ ಕೆಲಸವನ್ನು ನಮ್ಮ ಹಿಂದಿನವರು ಇದೇ ಕಬ್ಬಿಣದ ಚಾಣ ಬಳಸಿ ಮರದ ದಿಮ್ಮಿಗಳನ್ನು ಒಡೆಯುತ್ತಿದ್ದರು. ಮಳೆಗಾಲ, ಚಳಿಗಾಲಕ್ಕೆ ಸ್ನಾನಕ್ಕೆ ಬಿಸಿನೀರು ಬಳಸುವ ಅಭ್ಯಾಸ ಇದ್ದವರಿಗಂತೂ,ಅದರಲ್ಲೂ ಕಟ್ಟಿಗೆ ಒಲೆಯಾದರಂತೂ ಸಾಕಷ್ಟು ಉರುವಲು ಸಂಗ್ರಹದ ಅವಶ್ಯವಿದೆ. ಹಾಗಾಗಿ ಹಳ್ಳಿಗಳಲ್ಲಂತೂ ಒಣಗಿದ ಮರ ಲಭ್ಯವಿದ್ದಾಗ ಅವನ್ನು ಚಾಣದ ಸಹಾಯದಿಂದ ಚಿಕ್ಕ ಗಾತ್ರದಲ್ಲಿ ಒಡೆದು ಒಲೆಗೆ ಹಾಕಲು ಯೋಗ್ಯವಾಗುವಂತೆ ಮಾಡಿ, ಸಂಗ್ರಹಿಸಿ ಇಟ್ಟುಕೊಳ್ಳುತ್ತಾರೆ. ಇದನ್ನು ‘ಚಕ್ಕೆ’ ಎಂದು ಕರೆಯುತ್ತಾರೆ. ಚಕ್ಕೆ ಮಾಡಲು ಚಾಣ ಇದ್ದರೆ ಆ ಕೆಲಸ ಸಲೀಸು. ಅದಿಲ್ಲವಾದರೆ ಕೊಡಲಿ ಪೆಟ್ಟು ಕೊಟ್ಟು, ಅಂತಹ ಮರವನ್ನು ಒಡೆಯಲು ಹೆಚ್ಚಿನ ಶ್ರಮ ಹಾಕಬೇಕಾಗುತ್ತದೆ. ಹಾಗಾಗಿ ‘ಚಾಣ ಇದ್ದವನೇ ಚಾಣಕ್ಯ’ ಎನ್ನಬಹುದು.

—ಅರ್ಚನಾ ಜಿ. ಬೊಮ್ನಳ್ಳಿ, ಶಿರಸಿ



## ಅಡ್ಡಣಿಗೆ ಕಂಡಿರಾ?

ನಾವು ಬಾಲ್ಯದಲ್ಲಿದ್ದಾಗ ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲಿ ಅಡ್ಡಣಿಗೆ ಹಾಗೂ ಮಣೆಗಳನ್ನು ಕಾಣುತ್ತಿದ್ದೆವು. ಅಡ್ಡಣಿಗೆ ಎಂದರೆ ಊಟದ ತಟ್ಟೆಯನ್ನು ನೆಲಮಟ್ಟದಿಂದ ಕೊಂಚ ಎತ್ತರಕ್ಕೆ ಇಟ್ಟುಕೊಳ್ಳಲು ಸಹಾಯ ಮಾಡುವ ಸಾಧನ. ಹಣೆಗೆ ವಿಭೂತಿ ಬಳಿದು ಮಣೆಯ ಮೇಲೆ ಕುಳಿತುಕೊಂಡು ಅಡ್ಡಣಿಗೆಯ ಮೇಲೆ ತಟ್ಟೆಯನ್ನು (ಗಂಗಾಳ) ಇಟ್ಟು ಅದರ ಪಕ್ಕದಲ್ಲಿ ಒಂದು ಚೊಂಬು ಕುಡಿಯುವ ನೀರನ್ನಿಟ್ಟುಕೊಂಡು ಊಟ ಮಾಡುತ್ತಿದ್ದ ಹಿರಿಯರನ್ನು ಕಂಡಾಗ ಈಗಿನ ಯಾವ ಐಷಾರಾಮಿ ಹೋಟೆಲ್‌ಗಳೂ ನೀಡದಷ್ಟು ತೃಪ್ತಿಯನ್ನು ಅವು ಅವರಿಗೆ ನೀಡುತ್ತಿದ್ದವು ಎನ್ನಿಸುತ್ತದೆ. ಆದರೆ ಕಾಲ ಬದಲಾಗಿ ಅಡ್ಡಣಿಗೆ ಮಣೆಗಳೆಲ್ಲಾ ಕಣ್ಮರೆಯಾಗಿ ಎಲ್ಲರ ಮನೆಗಳಲ್ಲೂ ಊಟದ ಮೇಜುಗಳು (ಡೈನಿಂಗ್ ಟೇಬಲ್‌ಗಳು) ತಲೆಎತ್ತಿವೆ.



ಅಡುಗೆಮನೆಯಿಂದ ಕಣ್ಮರೆಯಾದ ಅಡ್ಡಣಿಗೆ ಪ್ರಸ್ತುತ ಅನೇಕ ಗ್ಯಾರೇಜುಗಳಲ್ಲಿ ಸ್ಥಾನ ಪಡೆದುಕೊಂಡಿದೆ. ಆದರೆ ಇಲ್ಲಿ ಅದರ ಸ್ಥಾನ ತುಸು ಬದಲಾಗಿದೆ. ಸೈಕಲ್ಲಿನ ಲೋಹದ ಚಕ್ರಕ್ಕೆ ಕಬ್ಬಿಣದ ಕಂಬಿಗಳನ್ನು ವೆಲ್ಡ್ ಮಾಡಿರುವ ಆ ಅಡ್ಡಣಿಗೆಗಳನ್ನು ಗ್ಯಾರೇಜುಗಳಲ್ಲಿ ದುಡಿಯುವವರು ಕೂರಲು ಬಳಸುತ್ತಾರೆ. ಬಾಲ್ಯದಲ್ಲಿ ಹಿತ್ತಾಳೆಯ ಅಡ್ಡಣಿಗೆಗಳ ವಿನ್ಯಾಸವನ್ನು ನೋಡಿದಾಗ ನಮಗೆ ಅವುಗಳೊಳಗೆ ಜೀವಂತಿಕೆಯನ್ನು ಕಂಡಂತೆ ಭಾಸವಾಗುತ್ತಿತ್ತು. ಆದರೆ ಗ್ಯಾರೇಜುಗಳಲ್ಲಿ ಕಂಡ ಅಡ್ಡಣಿಗೆಗಳು ತೀರಾ ನಿಸ್ಸಾರವಾಗಿ ಕಂಡವು. ಮನೆಗೆ ಬಂದು ಹುಡುಕಿದಾಗಲೇ ಗೊತ್ತಾಗಿದ್ದು ಅಡ್ಡಣಿಗೆಗಳು ಎಂದೋ ನಮ್ಮ ಮನೆಗಳನ್ನು ತೊರೆದು ಎಷ್ಟೋ ವರ್ಷಗಳು ಉರುಳಿದವೆಂದು. ಸಮಾನಭಾವವುಳ್ಳವರನ್ನೆಲ್ಲಾ ಫೋನಾಯಿಸಿ ಕೇಳಿದೆ, ಯಾರ ಮನೆಯಲ್ಲೂ ಅಡ್ಡಣಿಗೆಗಳಾಗಲೀ, ಅವುಗಳ ಒಂದೊಳ್ಳೆಯ ಪಟವಾಗಲೀ ಸಿಗಲಿಲ್ಲ.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ